# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಮುಖ್ಯ ಆಯುಕ್ತರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560002

ಸಂಖ್ಯೆ: ಕ.ಅ/ಕೇಂ.ಕ/ಪಿಆರ್/65 /2023-2024 ದಿನಾಂಕ:03-11 -2023

**ಮಾರ್ಗಸೂಚಿ**

**ವಿಷಯ:** ಪೌರಕಾರ್ಮಿಕರು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕುಟುಂಬದ ಓರ್ವ ಹೆಣ್ಣು ಮಗುವಿನ ವಿವಾಹಕ್ಕಾಗಿ ಸಹಾಯಧನ ನೀಡುವ ಬಗ್ಗೆ.

**ಉಲ್ಲೇಖ:** ಕಲ್ಯಾಣ ಕಾರ್ಯಕ್ರಮಗಳ ಕ್ರಿಯಾಯೋಜನೆ.

******

**ಕಾರ್ಯಕ್ರಮದ ಉದ್ದೇಶ:**

ಪಾಲಿಕೆಯ ಪೌರಕಾರ್ಮಿಕರು ಹಾಗೂ ಅವರ ಅವಲಂಬಿತರು ಹಾಗೂ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗದ ಕುಟುಂಬದಲ್ಲಿ ಅವರ ಹೆಣ್ಣು ಮಗಳ ಸರಳ ವಿವಾಹದ ಖರ್ಚುವೆಚ್ಚಗಳಿಗಾಗಿ ಪಾಲಿಕೆಯಿಂದ ರೂ.1.00 ಲಕ್ಷಗಳ ಸಹಾಯಧನ ವನ್ನು ನೀಡಿ ಪ್ರೋತ್ಸಾಹಿಸುವುದು ಕಾರ್ಯಕ್ರಮದ ಉದ್ದೇಶವಾಗಿರುತ್ತದೆ.

**ಒಂದು ಹೆಣ್ಣು ಮಗುವಿನ ವಿವಾಹದ ಖರ್ಚುವೆಚ್ಚಗಳಿಗಾಗಿ ಸಹಾಯಧನ ಪಡೆಯಲು ಅರ್ಹತೆಗಳು:**

1. ಅರ್ಜಿದಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು ಮೂರು ವರ್ಷಕ್ಕೂ ಮೇಲ್ಪಟ್ಟು ವಾಸಿಸುತ್ತಿರಬೇಕಾಗಿರುತ್ತದೆ, ಪಾಲಿಕೆಯ ಪೌರಕಾರ್ಮಿಕರು ಆಗಿದ್ದಲ್ಲಿ ಸದರಿ ಮಾನದಂಡವು ಅನ್ವಯವಾಗುವುದಿಲ್ಲ.
2. ಸದರಿ ಯೋಜನೆಯು 01-ಏಪ್ರಿಲ್-2023 ರಿಂದ ಜಾರಿಗೆ ಬಂದಿರುತ್ತದೆ. ಒಂದು ವೇಳೆ ಅರ್ಜಿದಾರರು ಈಗಾಗಲೇ 01-ಏಪ್ರಿಲ್-2023 ರ ನಂತರ ವಿವಾಹವಾಗಿದ್ದರೆ ಅರ್ಜಿಯನ್ನು ಸಲ್ಲಿಸಲು ಅರ್ಹರಿರುತ್ತಾರೆ.
3. ಸದರಿ ಸೌಲಭ್ಯವನ್ನು ಗರಿಷ್ಠ 2 ಹೆಣ್ಣು ಮಕ್ಕಳಿಗೆ,ಖಾಯಂ ಹಾಗೂ ನೇರ ವೇತನ ಪೌರಕಾರ್ಮಿಕರು ಪಡೆಯಲು ಅರ್ಹರಿರುತ್ತಾರೆ
4. ಖಾಯಂ ಪೌರಕಾರ್ಮಿಕರ ಹೆಣ್ಣು ಮಗಳ ವಿವಾಹದ ವೆಚ್ಚಗಳಿಗಾಗಿ ಸಹಾಯಧನಕ್ಕಾಗಿ ಸೇವಾ ಪುಸ್ತಕದಲ್ಲಿ ವಿವಾಹ ಆಗುವ ಮಗಳು ನಾಮಿನಿ ಆಗಿರುವುದು ಕಡ್ಡಾಯವಾಗಿರುತ್ತದೆ.
5. ನೇರ ವೇತನ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಮಗಳು ಎಂದು ಖಚಿತಪಡಿಸಲು ಆಧಾರ್ ಹಾಗೂ ಪಡಿತರ ಚೀಟಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
6. ತಹಶೀಲ್ದಾರ್ ರವರಿಂದ ಚಾಲ್ತಿಯಲ್ಲಿರುವ ಜಾತಿ ಹಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸುವುದು, ಪೌರಕಾರ್ಮಿಕರು ಗುರುತಿನ ಚೀಟಿಯನ್ನು ಹೊಂದಿರುವುದು ಕಡ್ಡಾಯವಾಗಿರುತ್ತದೆ.
7. ಪರಿಶಿಷ್ಟ ಜಾತಿ ಮತ್ತು ಪಂಗಡ ವರ್ಗದವರಿಗೆ ಸೌಲಭ್ಯವನ್ನು ಪಡೆಯಲು ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.3.00 ಲಕ್ಷ ಮೀರಿರಬಾರದು.
8. ಪೌರಕಾರ್ಮಿಕರಿಗೆ ಆದಾಯ ಮಿತಿ ಅನ್ವಯಿಸುವುದಿಲ್ಲ
9. ಸರ್ಕಾರದ ವತಿಯಿಂದ ನೀಡಿರುವ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್/ಬಿಪಿಎಲ್/ಎಪಿಎಲ್‌ಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗಿರುತ್ತದೆ. ಒಂದು ವೇಳೆ

ಯಾವುದೂ ಇರದ ಪಕ್ಷದಲ್ಲಿ ವಾಸಸ್ಥಳದ ದೃಢೀಕರಣಕ್ಕಾಗಿ ಬಾಡಿಗೆ/ಭೋಗ್ಯ ಕರಾರು ಪತ್ರ, ಗ್ಯಾಸ್ ಬಿಲ್ಲನ್ನು ಪಡೆದು ಸಲ್ಲಿಸಬೇಕಾಗಿರುತ್ತದೆ.

10. ಸದರಿ ಸೌಲಭ್ಯವನ್ನು ಕುಟುಂಬ ಹೆಣ್ಣು ಮಗಳ ವಿವಾಹದ ಖರ್ಚುವೆಚ್ಚಗಳಿಗಾಗಿ ಮಾತ್ರ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
11. ವಿವಾಹ ವಾಗುವ ವಧುವಿನ ಹಾಗೂ ವರನ ವಯಸ್ಸು ಸರ್ಕಾರವು ನಿಗಧಿಪಡಿಸಿರುವ ವಯೋಮಿತಿಗೆ ಒಳಪಡುವುದು ಕಡ್ಡಾಯವಾಗಿರುತ್ತದೆ.(ದಾಖಲೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.)
12. ವಿವಾಹ ನಿಶ್ಚಯವಾಗಿರುವ ಬಗ್ಗೆ ಮದುವೆಯ ಆಮಂತ್ರಣ ಪತ್ರವನ್ನು ಸಲ್ಲಿಸುವುದು ಕಡ್ಡಾಯಾವಾಗಿರುತ್ತದೆ.
13. ವಿವಾಹದ ನಂತರ ಕಡ್ಡಾಯವಾಗಿ ಉಪ ನೊಂದಾಣಾಧಿಕಾರಿಗಳ ಕಛೇರಿಯಲ್ಲಿ ವಿವಾಹದ ನೊಂದಣಿ ಮಾಡಿಸುವುದು.
14. ವಿಧವಾ ಹೆಣ್ಣು ಮಗಳು ಸದರಿ ಸೌಲಭ್ಯವನ್ನು ಈ ಹಿಂದೆ ಪಡೆಯದಿದ್ದರೆ, ಸದರಿ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
15. ಸಹಾಯಧನವನ್ನು ವಧುವಿನ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು, ಇನ್ನಾವುದೇ ಖಾತೆಗೆ ಸಹಾಯಧನವನ್ನು ಪಾವತಿ ಮಾಡಲಾಗುವುದಿಲ್ಲ.
16. ಮೇಲ್ಕಂಡ ಷರತ್ತುಗಳಲ್ಲಿ ಯಾವುದಾದರು ಉಲ್ಲಂಘಿಸಿದ್ದಲ್ಲಿ ಪಾಲಿಕೆಯಿಂದ ನೀಡಲಾಗಿರುವ ಸಹಾಯಧನವನ್ನು ಹಿಂದಿರುಗಿಸಲು ಅರ್ಜಿದಾರರು ಬದ್ಧರಾಗಿರುತ್ತಾರೆ.
17. ಸರಳ ವಿವಾಹ ಹಾಗೂ ಮೇಲ್ಕಂಡ ಷರತ್ತುಗಳನ್ನು ಒಪ್ಪಿ ಛಾಪಾ ಕಾಗದದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
18. ಒಂದು ವೇಳೆ ಸಲ್ಲಿಸಲಾಗಿರುವ ದಾಖಲೆಗಳು ನಕಲಿ ಅಥವಾ ಸುಳ್ಳು ಎಂದು ಕಂಡು ಬಂದಲ್ಲಿ ಕಾನೂನಿನ ರೀತಿ ಸೂಕ್ತ ಕ್ರಮವಹಿಸಿ ಸಹಾಯಧನವನ್ನು ಹಿಂಪಡೆಯಲಾಗುವುದು.

**ಆಯ್ಕೆ ವಿಧಾನ:-**

1. ಸ್ವೀಕರಿಸಲಾದ ಅರ್ಜಿ ಹಾಗೂ ಅದರೊಂದಿಗೆ ಲಗತ್ತಿಸಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ವಲಯ ಮಟ್ಟದ ಸಮಿತಿಯಲ್ಲಿ ಆಯ್ಕೆ ಮಾಡಲು ವಲಯದ ಕಲ್ಯಾಣಾಧಿಕಾರಿಗಳು ಸಮಿತಿ ಮುಂದೆ ಮಂಡಿಸುವುದು.
2. ಅರ್ಹ ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿಗಳನ್ನು ಸೂಕ್ತ ದಾಖಲೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸುವುದು ತದನಂತರ ದಾಖಲೆಗಳನ್ನು ಸಲ್ಲಿಸಿರುವ ಅರ್ಜಿಗಳನ್ನು ವಲಯ ಸಮಿತಿಯಲ್ಲಿ ಮಂಡಿಸುವುದು.
3. ಅರ್ಹ ದಾಖಲೆಗಳನ್ನು ಸಲ್ಲಿಸದೇ ಇರುವ ಅರ್ಜಿಗಳನ್ನು ತಿರಸ್ಕರಿಸುವುದು.
4. ವಲಯ ಸಮಿತಿಯು ಅನುಮೋದಿಸಿರುವ ಅರ್ಜಿಗಳನ್ನು ಪಾಲಿಕೆಯು ವಾರ್ಡ್ ಮೀಸಲಿರಿಸಿರುವ ವಲಯದ ಅನುದಾನದ ಲಭ್ಯತೆಯನ್ನು ಪರಿಶೀಲಿಸಿ ನಂತರ ಸೌಲಭ್ಯಗಳನ್ನು ವಿತರಿಸಲು ವಲಯ ಆಯುಕ್ತರು/ ವಲಯ ಜಂಟಿ ಆಯುಕ್ತರವರು ಅಗತ್ಯ ಕ್ರಮ ವಹಿಸುವುದು.
5. ಅನುದಾನದ ಲಭ್ಯತೆಗಿಂತ ಹೆಚ್ಚುವರಿ ಅರ್ಜಿಗಳು ಸ್ವೀಕೃತವಾದ್ದಲ್ಲಿ ಸದರಿ ಅರ್ಜಿಗಳನ್ನು ಮುಂದಿನ ಆರ್ಥಿಕ ವರ್ಷದಲ್ಲಿ ಕಾರ್ಯಕ್ರಮವಿದ್ದರೆ ಆದ್ಯತೆಯ ಮೇಲೆ ಪರಿಗಣಿಸುವುದು, ಕಾರ್ಯಕ್ರಮವು ಇಲ್ಲವಾದ್ದಲ್ಲಿ ಹಿಂಬರಹವನ್ನು ಅರ್ಜಿದಾರರಿಗೆ ನೀಡಲು ಸಹಾಯಕ ಕಂದಾಯ ಅಧಿಕಾರಿ (ಕಲ್ಯಾಣ) ರವರು ಅಗತ್ಯ ಕ್ರಮವಹಿಸುವುದು.

6. ಮುಖ್ಯ ಲೆಕ್ಕಾಧಿಕಾರಿ/ ವಲಯ ಉಪ ನಿಯಂತ್ರಕರು (ಹಣಕಾಸು) ರವರು ಅನುದಾನವನ್ನು ಸಂಬಂಧ ಪಟ್ಟ ಫಲಾನುಭವಿಗೆ 07 ದಿನಗಳ ಒಳಗಾಗಿ ಪಾವತಿಸಲು ಎಲ್ಲಾ ರೀತಿಯ ಕ್ರಮವಹಿಸುವುದು.

**ಮುಖ್ಯ ಆಯುಕ್ತರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**